ರೈತರ ಹೆಸರಿನ ಭೂಮಿ ಸರ್ಕಾರದ ಹೆಸರಿಗೆ ವರ್ಗಾವಣೆ ಆಗಿರುವುದು.

214(258); ಚೆಲುವರಾಯಸ್ವಾಮಿ ಎನ್ (ನಾಗಮಂಗಲ)

ಅ) ಮಂಡ್ಯ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಕಂಪ್ಯೂಟರ್ ಆಪರೇಟರ್‌ಗಳ ಬೇಜವಾಬ್ದಾರಿಯಿಂದ ಸುಮಾರು ಆರು ಸಾವಿರಕ್ಕೂ ಹೆಚ್ಚು ಮಂದಿ ರೈತರ ಭೂಮಿಗೆ ಸಂಬಂಧಿಸಿದ ಪಹಣಿ ದಾಖಲೆಗಳಲ್ಲಿ ರೈತರ ಹೆಸರಿನ ಬದಲಿಗೆ ಸರ್ಕಾರದ ಹೆಸರು ನಮೂದಾಗಿದ್ದು, ರೈತರ ಭೂಮಿ ಸರ್ಕಾರದ ಹೆಸರಿಗೆ ವರ್ಗಾವಣೆಗೊಂಡಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದದೆಯೇ; (ಪ್ರಕರಣಗಳ ತಾಲ್ಲೂಕುವಾರು ವಿವರ ಒದಗಿಸುವುದು)

ಆ) ಇದರಿಂದ ಭೂ ಮಾಲೀಕರಾದ ರೈತರು ಭೂಮಿಯ ಮೇಲೆ ಸಾಲ ಮೊದಲಾದ ಸೌಲಭ್ಯಗಳನ್ನು ಪಡೆಯಲು ತೊಂದರೆ ಆಗಿದ್ದು ಪಹಣಿಯಲ್ಲಿ ಮತ್ತೆ ರೈತರ ಹೆಸರು ನಮೂದಾಗಲು ನಿಯಮಗಳ ಪ್ರಕಾರ ಭಾರೀ ತೊಂದರೆ ಆಗಿದ್ದು, ರೈತರಿಗೆ ಅರ್ಜಿ ನೀಡಲು ಸೂಚನೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಇಂತಹ ಪ್ರಕರಣಗಳಲ್ಲಿ ರೈತರ ಹೆಸರು ನಮೂದಿಸಲು ಮತ್ತೆ ರೈತರಿಂದ ಅರ್ಜಿ ಪಡೆಯದೇ ನೇರವಾಗಿ ಇಲಾಖಾ ಕಛೇರಿಯಲ್ಲೇ ಬದಲಾವಣೆ ಮಾಡಲು ಸೂಚನೆಗಳನ್ನು ನೀಡಲಾಗುವುದೇ;

ಈ) ನೆಮ್ಮದಿ ಕೇಂದ್ರಗಳಲ್ಲಿ ಹೆಚ್ಚಿನ ಕಂಪ್ಯೂಟರ್ ಸೌಲಭ್ಯ ಒದಗಿಸಿ ಜನರಿಗೆ ಬೇಗ ದಾಖಲೆಗಳನ್ನು ಒದಗಿಸಲು ಸರ್ಕಾರ ಕ್ರಮ ತೆಗೆದುಕೊಳ್ಳಲಾಗುವುದೇ ?

ಶ್ರೀ. ಎ ಶ್ರೀನಿವಾಸ್ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ,ಆ) ಇಂತಹ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) ಮೇಲೆ ನಮೂದಿಸಿದಂತೆ ಇಂತಹ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದರೂ ಪಹಣಿಗಳಲ್ಲಿ ಯಾವುದಾದರೂ ದೋಷಗಳು ಕಂಡುಬಂದಲ್ಲಿ ಅವುಗಳನ್ನು ಸರಿಪಡಿಸಲು ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು.

ಈ) ನಾಡ ಕಛೇರಿಗಳಲ್ಲಿ ವಿವಿಧ ಸೇವೆಗಳಿಗಾಗಿ ಸರ್ವಜನಿಕರಿಂದ ಹೆಚ್ಚಿನ ಅರ್ಜಿಗಳು ಸ್ವೀಕಾರವಾಗಿ ಜನದಟ್ಟಣೆ ಹೆಚ್ಚಾದಂತಹ ಸಂದರ್ಭಗಳಲ್ಲಿ ಸದರಿ ನಾಡ ಕಛೇರಿಗಳಿಗೆ ಒಂದು ಹೆಚ್ಚುವರಿ ಲಾಗಿನ್ ಐ.ಡಿಗಳನ್ನು ನಿರ್ದೇಶನಾಲಯದಿಂದ ನೀಡಲಾಗುತ್ತಿದೆ. ಹೆಚ್ಚುವರಿ ಕಂಪ್ಯೂಟರ್ ಮತ್ತು ಡಾಟಾ ಎಂಟ್ರಿ ಆಪರೇಟರ್ ಅನ್ನು ಒದಗಿಸಲು ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ.

ಕಬ್ಬು ಸಾಗಾಣೆ ವಾಹನಗಳಿಗೆ ಸೂಕ್ತ ಸ್ಥಳಾವಕಾಶ

216(260); ಚೆಲುವರಾಯಸ್ವಾಮಿ ಎನ್ (ನಾಗ ಮಂಡಲ)

ಅ) ಮಂಡ್ಯದ ಮೈಷುಗರ್ ಕಾರ್ಖಾನೆಯಲ್ಲಿ ಕಬ್ಬು ಅರೆಯುವ ಕಾರ್ಯ ಪ್ರಾರಂಭವಾಗಿದ್ದು, ಕಾರ್ಖಾನೆಗೆ ಕಬ್ಬನ್ನು ತರುವ ಲಾರಿ, ಟ್ರಾಕ್ಟರ್ ಗಾಡಿಗಳನ್ನು ನಿಲ್ಲಿಸಲು ಸೂಕ್ತ ಸ್ಥಳವಿಲ್ಲದೆ ಭಾರಿ ಉದ್ದದ ಸರತಿಯ ಸಾಲು ಅಡ್ಡಾದಿಡ್ಡಿ ರೈತರಿಗೆ, ಜನರಿಗೆ, ವಾಹನ ಸಂಚಾರಕ್ಕೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕಾರ್ಖಾನೆಯ ಕೇನ್‌ಯಾರ್ಡ್ ಸ್ಥಳವನ್ನು ಆಧುನೀಕರಣಗೊಳಿಸಿ, ಪೂರ್ಣವಾಗಿ ಉಪಯೋಗಿಸಿಕೊಂಡು ಗಾಡಿ, ಲಾರಿ ಟ್ರಾಕ್ಟರಗಳಿಗೆ ಪ್ರತ್ಯೇಕ ಲೈನ್ ಮತ್ತು ತೂಕದ ಯಂತ್ರಗಳನ್ನು ವ್ಯವಸ್ಥೆಗೊಳಿಸಲು ಕಬ್ಬು ಸರಬರಾಜಿಗೆ ಬರುವ ವಾಹನಗಳ ಚಾಲಕರು, ರೈತರಿಗೆ ನೀರು, ಶೌಚಾಲಯ ವ್ಯವಸ್ಥೆಗಳನ್ನು ಸಮರ್ಪಕವಾಗಿ ಕಲ್ಪಿಸಲು ಕ್ರಮ ತೆಗೆದುಕೊಳ್ಳುವುದೇ;